# ‘ಪರಿಸರದ ಕತೆ’ ಕೃತಿಯಲ್ಲಿ ಮನುಷ್ಯ ಮತ್ತು ಪ್ರಕೃತಿಯ ಸಂಬಂಧಗಳು

**ಅಶೋಕ ಎನ್.ಎಸ್.**

ಸಹಾಯಕ ಪ್ರಾಧ್ಯಾಪಕರು, ಭಾಷಾ ವಿಭಾಗ, ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಸತ್ಯ ಸಾಯಿ ಗ್ರಾಮ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ.

**DOI: https://doi.org/10.5281/zenodo.18785449**

## ABSTRACT:

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಕನ್ನಡದಲ್ಲಿ ಪರಿಸರ ಸಾಹಿತ್ಯ ಪ್ರಕಾರಕ್ಕೆ ಭದ್ರ ಬುನಾದಿ ಹಾಕಿದವರು. ಅವರ ‘ಪರಿಸರದ ಕತೆ’ ಕೃತಿಯನ್ನು ಆಧರಿಸಿದ ಈ ಲೇಖನವು, ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಂಕೀರ್ಣ ಸಂಬಂಧಗಳನ್ನು ವೈಜ್ಞಾನಿಕ ಮತ್ತು ಅನುಭಾವಿಕ ನೆಲೆಗಳಲ್ಲಿ ವಿಶ್ಲೇಷಿಸುತ್ತದೆ. ಲೇಖಕರು ‘ಸುಸ್ಮಿತಾ ಮತ್ತು ಹಕ್ಕಿಮರಿ’, ‘ಕಿವಿ’ ಹಾಗೂ ಇತರೆ ಕಥೆಗಳ ದೃಷ್ಟಾಂತಗಳ ಮೂಲಕ, ಪ್ರಕೃತಿಯಲ್ಲಿ ಮಾನವನ ಅತಿಯಾದ ಹಸ್ತಕ್ಷೇಪ ಮತ್ತು ಅಜ್ಞಾನದಿಂದಾಗುವ ಅನಾಹುತಗಳನ್ನು ಗುರುತಿಸಿದ್ದಾರೆ. ಜೀವವಿಕಾಸದ ನಿಯಮಗಳು, ಪ್ರಾಣಿ ಪ್ರಪಂಚದ ವಿಸ್ಮಯ ಮತ್ತು ಪರಿಸರ ಸಂರಕ್ಷಣೆಯ ಕುರಿತು ತೇಜಸ್ವಿಯವರು ಮೂಡಿಸಿರುವ ಎಚ್ಚರಿಕೆಯ ಧ್ವನಿಯನ್ನು ಹಾಗೂ ಸಹಜ ಜೀವನಶೈಲಿಯ ಮಹತ್ವವನ್ನು ಇಲ್ಲಿ ಚರ್ಚಿಸಲಾಗಿದೆ.

## KEYWORDS:

ಪೂರ್ಣಚಂದ್ರ ತೇಜಸ್ವಿ, ಪರಿಸರ ಸಾಹಿತ್ಯ, ಮನುಷ್ಯ ಮತ್ತು ಪ್ರಕೃತಿ, ಜೀವವೈವಿಧ್ಯ, ವೈಜ್ಞಾನಿಕ ಮನೋಧರ್ಮ.

ಹೊಸಗನ್ನಡ ಸಾಹಿತ್ಯ ಘಟ್ಟಗಳಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ, ಸ್ತ್ರೀವಾದಿ ಮತ್ತು ಮುಸ್ಲಿಂ ಸಂವೇದನೆ ಹೀಗೆ ಹಲವಾರು ವಿಭಜನೆಗಳನ್ನು ಹಾಗೂ ಚೌಕಟ್ಟುಗಳನ್ನು ನಾವು ಕಾಣುತ್ತೇವೆ. ನವ್ಯ ಸಾಹಿತ್ಯ ಘಟ್ಟ/ಸಂವೇದನೆಯಲ್ಲಿಯೇ ಗುರುತಿಸಿಕೊಂಡು ಆ ನಂತರ ಅದೊಂದು ಭ್ರಮೆಯೆಂದು ಅದರಿಂದಾಚೆ ಬಂದಂತಹ ವಿಸ್ಮಯ ಬರಹಗಾರರಾದ ಕೆ.ಪಿ ಪೂರ್ಣಚಂದ್ರ ತೇಜಸ್ವಿಯವರು ಪರಿಸರ ಸಾಹಿತ್ಯ ಎಂಬ ಹೊಸ ಪ್ರಕಾರವನ್ನು ಹುಟ್ಟುಹಾಕಿದರು ಎಂದರೆ ಅತಿಶಯೋಕ್ತಿಯಲ್ಲ. ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದ ಮುನ್ನುಡಿಯಲ್ಲಿ ‘ಹೊಸದಿಗಂತದೆಡೆಗೆ’ಯಲ್ಲಿ ಅವರೇ ಹೇಳಿರುವ ಹಾಗೆ ಅವರ ಮೇಲೆ ಮೂರು ಬಗೆಯ ಚಿಂತನೆಗಳು ಪ್ರಭಾವ ಬೀರಿವೆ ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕಾಗುತ್ತದೆ.

“ಲೋಹಿಯಾರವರ ತತ್ವಚಿಂತನೆ, ಕುವೆಂಪುರವರ ಕಲಾಸೃಷ್ಟಿ, ಕಾರಂತರ ಜೀವನದೃಷ್ಟಿ ಮತ್ತು ಬದುಕಿನ ಪ್ರಯೋಗಶೀಲತೆ. ಈ ಮೂರೇ ನನ್ನ ಈಚಿನ ಸಾಹಿತ್ಯ ರಚನೆಯ ಮೇಲೆ ಗಾಢ ಪರಿಣಾಮವನ್ನುಂಟು ಮಾಡಿರುವುವು. ಬಹುಶಃ

ಮುಂಬರುವ ಕಲಾವಿದರಿಗೆ ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ಚೈತನ್ಯಶಕ್ತಿಯಾಗಬಲ್ಲಂಥವು ಈ ಮೂರೇ".

ಪರಿಸರದಲ್ಲಿಯೇ ವಾಸ ಮಾಡುತ್ತಾ ಪರಿಸರ ಸಾಹಿತ್ಯವನ್ನು ರಚನೆ ಮಾಡಿ ಪರಿಸರ ಸಾಹಿತಿಯಾದವರು ಇವರು. ಇವರಿಗಿಂತ ಮೊದಲು ಕನ್ನಡ ಸಾಹಿತ್ಯದಲ್ಲಿ ಪರಿಸರ ಕಾಳಜಿ ವಚನಯುಗದಿಂದಲೇ ಆರಂಭವಾಗುತ್ತದೆ. ಇದಕ್ಕಿಂತ ಮೊದಲು ಅನೇಕ ಹಳಗನ್ನಡ ಕಾವ್ಯಗಳಲ್ಲಿ ಪ್ರಕೃತಿ ವರ್ಣನೆ ಬಹಳ ಅಮೋಘವಾಗಿ ಚಿತ್ರಿತವಾಗಿದೆ. ಆಧುನಿಕ ಸಾಹಿತ್ಯದಲ್ಲಿ ಬೇಂದ್ರೆ, ಕುವೆಂಪು, ಶಿವರಾಮ ಕಾರಂತ ಮುಂತಾದ ಅನೇಕರು ಪ್ರಕೃತಿಯ ವರ್ಣನೆ, ಅದರ ಚೆಲುವು ಒಲವು, ದುರಂತ, ಮನುಷ್ಯನ ಭೋಗಲಾಲಸೆಯನ್ನು ಕಟ್ಟಿಕೊಟ್ಟಿದ್ದಾರೆ. ನಿಸರ್ಗ ಕವಿ ಕುವೆಂಪು ಅವರಲ್ಲಿ ಪ್ರಕೃತಿ ದೈವತ್ವಕ್ಕೆ ಏರುವ ಬಗೆಯನ್ನು ನಾವು ನೋಡಬಹುದು.

**ಮಲೆಯನಾಡೆನಗೆ ತಾಯಿ ಮನೆ**
**ಕಾಡು ದೇವರ ಬೀಡು**
**ಗಿರಿಯ ಮುಡಿ ಶಿವನ ಗುಡಿ,**
**ಬನವೆಣ್ಣೆ ಮೊದಲಿನಾ ಮನದನ್ನೆ**

ತೇಜಸ್ವಿಯವರು ಹೇಳುವ ಹಾಗೆ ಪರಿಸರದ ಬಗ್ಗೆ ಅವರಲ್ಲಿ ಹೆಚ್ಚು ಕುತೂಹಲ ಹುಟ್ಟಿದ್ದು ಕುವೆಂಪು ಅವರಿಂದಲೇ. ತೇಜಸ್ವಿಯವರ ಬರಹಗಳಲ್ಲಿ ನಿಸರ್ಗದ ಬೆರಗು, ವಿಸ್ಮಯದ ಜೊತೆ ವೈಜ್ಞಾನಿಕತೆ, ಅದರೊಂದಿಗಿನ ಮನುಷ್ಯನ ಸಂಬಂಧಗಳು ಹೇಗಿರಬೇಕೆಂಬ ಚಿಂತನೆ ಕಂಡುಬರುತ್ತದೆ. ಅವರ 'ಕರ್ವಾಲೋ', 'ಚಿದಂಬರ ರಹಸ್ಯ', 'ಜುಗಾರಿ ಕ್ರಾಸ್', 'ಮಾಯಾಲೋಕ', 'ಕಾಡು ಮತ್ತು ಕ್ರೌರ್ಯ', 'ಸ್ವರೂಪ', 'ನಿಗೂಢ ಮನುಷ್ಯರು', 'ಹುಲಿಯೂರಿನ ಸರಹದ್ದು', 'ಅಬಚೂರಿನ ಪೋಸ್ಟಾಫೀಸು', 'ಕಿರಗೂರಿನ ಗಯ್ಯಾಳಿಗಳು' ಕೃತಿಗಳಲ್ಲಿ ಪರಿಸರವನ್ನು ಬಿಟ್ಟು ಮನುಷ್ಯನ ಅಸ್ತಿತ್ವ ಸಂಪೂರ್ಣ ಶೂನ್ಯವಾಗಿರುತ್ತದೆ ಎಂಬ ಅಂಶ ಕಂಡುಬರುತ್ತದೆ. ಪ್ರಕೃತಿ ಮತ್ತು ಮನುಷ್ಯ ಸಂಬಂಧ ಹೊರತುಪಡಿಸಿ ಅವರ ಬರಹ ಕಾಣುವುದೇ ಅಪರೂಪ.

ಆಧುನಿಕ ಯುಗದಲ್ಲಿ ಕೈಗಾರಿಕೀಕರಣ, ನಗರೀಕರಣ, ಜಾಗತೀಕರಣದಿಂದ ಅಗತ್ಯಕ್ಕಿಂತ ಮಾನವನ ಅತಿಯಾದ ಸಂಪನ್ಮೂಲ ದುರುಪಯೋಗದಿಂದ ಪರಿಸರ ಗಂಭೀರವಾದ ಸಮಸ್ಯೆಗಳನ್ನು ಎದುರಿಸುತ್ತಿದೆ. ಪರಿಸರದಲ್ಲಿ ಎಲ್ಲ ಪ್ರಾಣಿಗಳಂತೆ ಮಾನವ ಕೂಡಾ ಒಂದು ಪ್ರಾಣಿ. ಆದರೆ ಇಂದು ತಾನೇ ಈ ಭೂಮಿ ಮೇಲೆ ಮುಖ್ಯ, ಉಳಿದವೆಲ್ಲಾ ಅಮುಖ್ಯ ಎಂದು ಭಾವಿಸಿದ್ದಾನೆ. ತಾನು ಕೂಡಾ ಪರಿಸರದ ಒಂದು ಭಾಗ ಎಂಬುದನ್ನು ಸಂಪೂರ್ಣವಾಗಿ ಮರೆತಿದ್ದಾನೆ. ಪರಿಸರವನ್ನು ತನಗೆ ಹೇಗೆ ಬೇಕೋ ಹಾಗೆ ನಿಯಂತ್ರಣದಲ್ಲಿಟ್ಟುಕೊಂಡು ತನ್ನ ಸ್ವಾರ್ಥ ಭೋಗಲಾಲಸೆಗಳಿಗೆ ಬಳಸಿಕೊಳ್ಳುತ್ತಿದ್ದಾನೆ. ಈ ಹಿನ್ನೆಲೆಯಲ್ಲೇ ಪರಿಸರ ಸಾಹಿತ್ಯವು ಎಚ್ಚರಿಕೆಯ ಧ್ವನಿಯಾಗಿ ನಮ್ಮಲ್ಲಿರಬೇಕಾದ ಜವಾಬ್ದಾರಿಗಳು ಮತ್ತು ಪರಿಸರಪೂರಕ ಜೀವನಶೈಲಿಯನ್ನು ಹೇಗೆ ರೂಢಿಸಿಕೊಳ್ಳಬೇಕೆಂದು ಹಲವಾರು ಚಿಂತನೆಗಳನ್ನು ನಮ್ಮ ಮುಂದೆ

ತಂದಿಡುತ್ತದೆ. ಇದು ಪರಿಸರ ನಾಶದ ಪರಿಣಾಮಗಳನ್ನು ವಿವರಿಸುವುದು ಮಾತ್ರವಲ್ಲದೆ ಸಂರಕ್ಷಣೆಯ ಅಗತ್ಯತೆಯನ್ನು ನಮ್ಮಲ್ಲಿ ಮನವರಿಕೆ ಮಾಡುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಅಳಿವಿನಂಚಿನಲ್ಲಿರುವ ಪರಿಸರ ಕುರಿತು ಓದುಗರಲ್ಲಿ ಸಂವೇದನೆ, ಜಾಗೃತಿ ಮತ್ತು ಹೊಣೆಗಾರಿಕೆಯ ಮನೋಭಾವವನ್ನು ಬೆಳೆಸುತ್ತದೆ. ತೇಜಸ್ವಿಯವರ 'ಪರಿಸರದ ಕತೆ', 'ಮಿಸ್ಸಿಂಗ್ ಲಿಂಕ್', 'ಸಹಜಕೃಷಿ', 'ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು', 'ಹಕ್ಕಿಪುಕ್ಕ', 'ಮಿಂಚುಳ್ಳಿ: ಕನ್ನಡ ನಾಡಿನ ಹಕ್ಕಿಗಳು', 'ಫ್ಲೈಯಿಂಗ್ ಸಾಸರ್', 'ನಡೆಯುವ ಕಡ್ಡಿ ಹಾರುವ ಎಲೆ', ಫುಕುವೋಕ ಅವರ 'ಒಂದು ಹುಲ್ಲಿನ ಕ್ರಾಂತಿ' ಹೀಗೆ ಇನ್ನು ಅನೇಕ ಕೃತಿಗಳ ಮೂಲಕ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಸರವನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಚಿಂತಿಸುತ್ತಾ ಪರಿಸರದಲ್ಲಿಯೇ ನೆಲೆಸುತ್ತಾ ಅದರ ವಿಸ್ಮಯವನ್ನು ನಮ್ಮ ಮುಂದೆ ಸದ್ದಿಲ್ಲದೆ ಇಟ್ಟಂತಹ ಅಪರೂಪದ ಲೇಖಕರು ತೇಜಸ್ವಿ.

ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಅವರ 'ಪರಿಸರದ ಕತೆ' ಕೃತಿಯಲ್ಲಿ ಮೂಡಿಬಂದಿರುವ ಪರಿಸರದ ವೈಜ್ಞಾನಿಕ ಚಿಂತನೆ ಮತ್ತು ಅದರೊಂದಿಗಿನ ಮನುಷ್ಯ ಸಂಬಂಧಗಳ ಚಿತ್ರಣವನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಪ್ರಕೃತಿ ಕೇವಲ ಮಾನವನ ಭೋಗಜೀವನಕ್ಕೆ ಇರುವ ವಸ್ತುವಲ್ಲ ಅದು ಒಂದು ಜೀವಂತ ವ್ಯವಸ್ಥೆಯಾಗಿದ್ದು ಮಾನವನ ಬದುಕಿನ ಅವಿಭಾಜ್ಯ ಅಂಗ ಎಂಬ ಅರಿವು ಅವರ ಈ ಪರಿಸರ ಸಾಹಿತ್ಯದ ಮೂಲಕ ನಮಗೆ ವೇದ್ಯವಾಗುತ್ತದೆ. ಇದರ ಕಥೆಗಳಲ್ಲಿ ಕೆರೆ, ಕಾಡು, ಕಲ್ಲು ಮಣ್ಣು, ನದಿ, ಬೆಟ್ಟಗುಡ್ಡ, ಪ್ರಾಣಿ–ಪಕ್ಷಿಗಳು ಇವೆಲ್ಲದರ ಜೊತೆ ಮನುಷ್ಯ ಸಹಜಜೀವಿಯಾಗಿ ಹೇಗೆ ಬದುಕಬೇಕೆಂಬ ಅರಿವನ್ನು ಇಲ್ಲಿ ಪಡೆಯಬಹುದು. ಹವಾಮಾನ ಮತ್ತು ಪರಿಸರ ಸಮತೋಲನದಂತಹ ಮುಂತಾದ ಅನೇಕ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಈ ಬಗ್ಗೆ ಮನುಷ್ಯನಿಗೆ ಇರಬೇಕಾದ ಹೊಣೆಗಾರಿಕೆಯನ್ನು ಅವರ ಬರಹಗಳಲ್ಲಿ ಕಾಣಬಹುದು.

ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನೇ ತೆರೆದಿಟ್ಟ ಕೃತಿ ಪೂರ್ಣಚಂದ್ರ ತೇಜಸ್ವಿಯವರ ''ಪರಿಸರದ ಕತೆ''. ಪರಿಸರದ ಕುರಿತಾದ ಬರವಣಿಗೆಗೆ ಹೊಸ ಭಾಷೆ, ಹೊಸ ದೃಷ್ಟಿಕೋನವನ್ನು ಪರಿಚಯಿಸಿದ ಈ ಕೃತಿ ಇಪ್ಪತ್ತಕ್ಕೂ ಅಧಿಕ ಮರುಮುದ್ರಣಗಳನ್ನು ಕಂಡಿರುವುದೇ ಅದರ ಅಪಾರ ಜನಪ್ರಿಯತೆಗೆ ಸಾಕ್ಷಿ. ಈ ಕೃತಿಯಲ್ಲಿರುವ 14 ಅಧ್ಯಾಯಗಳೂ ಒಂದಕ್ಕೊಂದು ವಿಭಿನ್ನವಾಗಿಯೂ ರೋಚಕವಾಗಿಯೂ ಇವೆ. ನಾವು ಕಾಡಿಗೆ ಹೋದರೂ ಗಮನಿಸದೆ ಬಿಡುವ ಅನೇಕ ಸೂಕ್ಷ್ಮ ದೃಶ್ಯಗಳನ್ನು ತೇಜಸ್ವಿಯವರು ತಮ್ಮ ವಿಶಿಷ್ಟ ಹಾಸ್ಯಭರಿತ ಶೈಲಿಯಲ್ಲಿ ಇಲ್ಲಿ ದಾಖಲಿಸಿದ್ದಾರೆ. ಜೊತೆಗೆ ತಮ್ಮ ಪರಿಸರ ಜೀವನದಲ್ಲಿ ಎದುರಾದ ಮಾಸ್ತಿ, ಬೈರ, ಮಾರ, ಎಂಗ್ಟ, ಕಾಳಪ್ಪ, ಮೇಸ್ತ್ರಿ ಸೀನಪ್ಪ ಸೇರಿದಂತೆ ಹಲವಾರು ಹಳ್ಳಿಗರ ಸ್ವಭಾವ, ಮಾತು, ನಡೆನುಡಿಗಳನ್ನು ಯಾವುದೇ ಅಲಂಕಾರವಿಲ್ಲದೆ ಇದ್ದದ್ದನ್ನು ಇದ್ದಂತೆ ಹೇಳುತ್ತಾ ಪರಿಸರ ಮತ್ತು ಮಾನವ ಸಂಬಂಧಗಳನ್ನು ಅರ್ಥೈಸಿಕೊಳ್ಳುವ ಹೊಸ ದಾರಿಯನ್ನೂ ತೆರೆದಿಟ್ಟಿದ್ದಾರೆ.

'ಪರಿಸರದ ಕತೆ' ಕಥೆಯಲ್ಲಿ ಕಥೆಗಾರರು ತೋಟದ ಆರಂಭಿಕ ವರ್ಷಗಳಲ್ಲಿ ತಮ್ಮ ನಾಯಿ 'ಕಿವಿ'ಯೊಂದಿಗೆ ಕೋವಿ ಹಿಡಿದು ಕಾಡಿನಲ್ಲಿ ಅಲೆದಾಡುತ್ತಿದ್ದರು. ಇದನ್ನು ಕಂಡ ಅನೇಕ ಜನರು ಲೇಖಕ ಹಾಳಾದನೆಂದು ವ್ಯಸನಪಟ್ಟಿದ್ದರು ಮತ್ತು ನಾಯಿಯನ್ನು ದೂಷಿಸಿದ್ದರು. ಲೇಖಕರ ಕೈಗೆ ಕೋವಿ ಬರುವ ವೇಳೆಗೆ ಕಾಡುಪ್ರಾಣಿಗಳ ಸಂಖ್ಯೆ ಕಡಿಮೆಯಾಗುತ್ತಿತ್ತು. ಕಾಡಿನಲ್ಲಿ ಪ್ರಾಣಿಗಳನ್ನು ನೋಡುವುದು ಅವರಿಗೆ ಅಸಾಧಾರಣ ಅನುಭವ ನೀಡಿತ್ತು. ಲೇಖಕರು ಮತ್ತು ಕಿವಿ ಅನೇಕ ಪ್ರಾಣಿಗಳನ್ನು ಬೇಟೆಯಾಡಿದ್ದರೂ, ಆಗಿನ ಪ್ರಾಣಿಗಳ ಸಂಖ್ಯೆಗೆ ಹೋಲಿಸಿದರೆ ಅವರಿಗೆ ಅಷ್ಟೊಂದು ಬೇಸರವಿರಲಿಲ್ಲ. ಇದಕ್ಕೆ ಭಾರತದ ವನಸಂಪತ್ತಿನ ಬಗ್ಗೆ ಇದ್ದ ಅಜ್ಞಾನವೂ ಕಾರಣವಾಗಿರಬಹುದು ಎಂದು ಅವರು ಹೇಳುತ್ತಾರೆ. ಈ ಬೇಟೆಯ ಅನುಭವವು ಲೇಖಕರಿಗೆ ಕಾಡಿನ ಬಗ್ಗೆ ಮತ್ತು ಕಾಡುಪ್ರಾಣಿಗಳ ಬಗ್ಗೆ ಆತ್ಮೀಯತೆಯನ್ನು ಬೆಳೆಸಲು ಸಹಾಯವಾಯಿತೆಂದು ಅವರು ಹೇಳುತ್ತಾ,"ಈಗ ಕಾಡುಗಳಿಲ್ಲದ, ಕಾಡುಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ. ಕಾಡುಗಳನ್ನೂ, ಕಾಡುಪ್ರಾಣಿಗಳನ್ನೂ ಸಂರಕ್ಷಿಸಬೇಕೆಂದು ನಾನು ಹೇಳಿದರೆ ಅದು ನನ್ನ ತಿಳುವಳಿಕೆಯ ಕಾರಣಗಳಿಗಿಂತಲೂ ಹೆಚ್ಚಾಗಿ ಅವುಗಳೊಂದಿಗೆ ನಾನು ಹೊಂದಿರುವ ವ್ಯಕ್ತಿನಿಷ್ಠ ಸಂಬಂಧವೇ ಆಗಿದೆ. ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನೂ, ಅವುಗಳ ಪರಿಸರವನ್ನೂ ಧ್ವಂಸ ಮಾಡಿದಾಗ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದುಕೊಂಡಂತಾಗಿ ಮನಸ್ಸು ಖಿನ್ನವಾಗುತ್ತದೆ. ಈ ದುರಂತದ ದುಃಖವನ್ನು ಅಂಕಿ ಸಂಖ್ಯೆಗಳ ಆಧಾರದ ಮೇಲೆ, ಸಿದ್ಧಾಂತಗಳ ಮುಖಾಂತರ ವಿಶ್ಲೇಷಿಸಿ, ಪರಿಸರ ಸಂರಕ್ಷಣೆಯ ಬಗ್ಗೆ ಜನಗಳಿಗೆ ಹೇಳಲು ಮನಸ್ಸೇ ಬರುವುದಿಲ್ಲ. ಏಕೆಂದರೆ, ನಾನು ಕಂಡಂತೆ ಕಾಡನ್ನು ಕಂಡಿಲ್ಲದ, ಅನುಭವಿಸಿಲ್ಲದ ಮನಸ್ಸುಗಳಿಗೆ ನನ್ನ ಮನಸ್ಸಿನ ದುಗುಡವನ್ನು ನಿರ್ಜೀವ ಅಂಕಿಅಂಶಗಳ ವಿಶ್ಲೇಷಣೆ ಮುಖಾಂತರ ಹೇಳಿ ಪ್ರತಿಸ್ಪಂದನ ಉಂಟುಮಾಡುವುದು ಕಷ್ಟಸಾಧ್ಯ" ಎಂದು ಲೇಖಕರು ವಿಷಾದ ವ್ಯಕ್ತಪಡಿಸುತ್ತಾರೆ.

ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ವ್ಯಾಪಾರೀಕರಣ ಜಗತ್ತಿನಲ್ಲಿ ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಮಾನವೀಯತೆಯನ್ನು ಕಳೆದುಕೊಂಡು ಕ್ರೌರ್ಯವನ್ನು ಮೆರೆಯುತ್ತಿದ್ದಾನೆ. ಪ್ರತಿದಿನವೂ ಸುದ್ದಿಪತ್ರಿಕೆ, ಟಿವಿ ಚಾನೆಲ್ ನ್ಯೂಸ್ ರೂಮುಗಳಿಂದ ಕಾಡಿನಿಂದ ದೈತ್ಯ ಆನೆ ಯಮನಂತೆ ಬಂದು ತುಳಿದು ವ್ಯಕ್ತಿ ಸಾವಾಯಿತು! ಮಿಂಚಿನ ವೇಗದಲ್ಲಿ ಬಂದ ಚಿರತೆ ಹಸುಕರುವನ್ನು ಎತ್ತಿಕೊಂಡು ಹೋಯಿತು! ಆನೆಯ ಜೊತೆ ಸೆಲ್ಫಿ ವ್ಯಕ್ತಿ ಸಾವು! ಹೀಗೆ ಆಕ್ರೋಶ ವ್ಯಕ್ತಪಡಿಸುವುದನ್ನು ನಾವು ನೋಡಿರುತ್ತೇವೆ. ಬಂಡವಾಳಶಾಹಿ ವ್ಯವಸ್ಥೆ ಸರ್ಕಾರಗಳೊಂದಿಗೆ ಶಾಮೀಲಾಗಿ ತನ್ನ ಸ್ವಾರ್ಥಕ್ಕಾಗಿ ಬೆಟ್ಟಗುಡ್ಡ, ಕಾಡು ಪ್ರದೇಶ ಎಲ್ಲವನ್ನೂ ಒತ್ತುವರಿ ಮಾಡಿಕೊಂಡು ತಮ್ಮದೇ ಆದಂತಹ ಬೇಲಿಯನ್ನು ಹಾಕಿಕೊಳ್ಳುತ್ತಿದ್ದಾರೆ. ಕಾಡುಪ್ರಾಣಿಗಳ ವಾಸಸ್ಥಾನಕ್ಕೆ ಮನುಷ್ಯ ಲಗ್ಗೆ ಇಡುತ್ತಿದ್ದಾನೆ. ಇದನ್ನು ತಡೆಯಬೇಕಾದರೆ ಸಂಪೂರ್ಣವಾಗಿ ಮನುಷ್ಯ ಪರಿಸರಸ್ನೇಹಿಯಾಗಿ ತನ್ನ ಜೀವನಶೈಲಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ.

ಮಹಾತ್ಮ ಗಾಂಧೀಜಿ ಅವರು ಹೇಳುವಂತೆ "ಈ ಭೂಮಿ ಮನುಷ್ಯನ ಅಗತ್ಯತೆಗಳನ್ನು ಪೂರೈಸುತ್ತದೆಯೇ ಹೊರತು ದುರಾಸೆಗಳನ್ನಲ್ಲ" ಎಂಬ ಮಾತು ಇಲ್ಲಿ ತುಂಬಾ ಮುಖ್ಯವಾಗುತ್ತದೆ.

ಲೇಖಕರ ಮೈಸೂರಿನ ಮನೆಯ ಎದುರಿಗಿದ್ದ ಹೊಲಗಳು ಮತ್ತು ಬಯಲು ಪ್ರದೇಶಗಳು ಈಗ ಬಡಾವಣೆಗಳಾಗಿ ಬದಲಾಗಿರುವ ನೆನಪುಗಳನ್ನು ಈ 'ಪರಿಸರದ ಕತೆ'ಯಲ್ಲಿ ಹಂಚಿಕೊಳ್ಳಲಾಗಿದೆ. ಹಿಂದೆ ಆ ಪ್ರದೇಶದಲ್ಲಿ ಓತಿಕ್ಯಾತ, ಹಾವು, ಮೊಲ, ಮತ್ತು ಕಾಂಗ್ರೂ ಇಲಿಗಳಂತಹ ಸಣ್ಣ ಪ್ರಾಣಿಗಳಿದ್ದವು. ಲೇಖಕರು ಮತ್ತು ಅವರ ತಮ್ಮ ಇಲಿಗಳ ಬಿಲಗಳಿಗೆ ಕಲ್ಲು ತುಂಬಿ ಮುಚ್ಚಿದ್ದರು. ಮಾರನೆಯ ದಿನ ಕಲ್ಲುಗಳು ಮಾಯವಾಗಿದ್ದು, ಇಲಿಗಳು ರಾತ್ರಿಯಲ್ಲಿ ಸಕ್ರಿಯವಾಗಿರುವುದನ್ನು ಖಚಿತಪಡಿಸಿತು. ಇಲಿಗಳ ಹೆಜ್ಜೆ ಗುರುತುಗಳು ಮತ್ತು ಹಾವುಗಳಿಂದ ತಪ್ಪಿಸಿಕೊಳ್ಳಲು ಅವು ಮಾಡಿಕೊಂಡಿದ್ದ ಕಳ್ಳ ದಾರಿಗಳನ್ನು ತಂದೆಯವರು ತೋರಿಸಿದರು. ಈ ಘಟನೆಗಳು ಲೇಖಕರ ಸೀಮಿತ ಪ್ರಪಂಚದ ಕಲ್ಪನೆಯನ್ನು ವಿಸ್ತರಿಸಿ, ಪ್ರಾಣಿಗಳ ವಿಶ್ವ ಸಮಾಜದ ಬಗ್ಗೆ ಆಸಕ್ತಿ ಮತ್ತು ಕುತೂಹಲ ಕೆರಳಿಸಿತು. ಲೇಖಕರಿಗೆ ಚಿಕ್ಕಂದಿನಿಂದಲೂ ಪ್ರಕೃತಿ ಮತ್ತು ಪರಿಸರದ ಬಗ್ಗೆ ತಂದೆಯಿಂದ ಪ್ರೇರಿತವಾದ ಕುತೂಹಲವಿತ್ತು. ಈ ಆಸಕ್ತಿಯಿಂದಾಗಿ ಅವರ ಓದು ಮತ್ತು ವಿದ್ಯಾಭ್ಯಾಸದಲ್ಲಿ ಆಸಕ್ತಿ ಕಡಿಮೆಯಾಯಿತು. ಮನೆಯ ಕಿಟಕಿಯ ಬಳಿ ಗೂಡು ಮಾಡಿದ ಹಕ್ಕಿಗಳು, ನುಗ್ಗೆ ಮರಕ್ಕೆ ಹತ್ತುತ್ತಿದ್ದ ಕಂಬಳಿ ಹುಳುಗಳು, ಮತ್ತು ನಾಚಿಗೆ ಮುಳ್ಳಿನ ಗಿಡದಂತಹ ಪ್ರಕೃತಿಯ ವಿಸ್ಮಯಗಳು ಲೇಖಕರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ಲೇಖಕರು ಈ ಎಲ್ಲ ವೀಕ್ಷಣೆಗಳ ಬಗ್ಗೆ ತಮ್ಮ ತಂದೆಯವರ ಬಳಿ ವರದಿ ಒಪ್ಪಿಸುತ್ತಿದ್ದರು ಮತ್ತು ಅವರ ವಿವರಣೆಗಳು ಹಾಗೂ ಕಾಡಿನ ಅನುಭವಗಳನ್ನು ಕೇಳಿ ಪ್ರಭಾವಿತರಾಗಿದ್ದರು. ಲೇಖಕರು ನಂತರ ಮಲೆನಾಡಿನ ಮೂಡಿಗೆರೆಯಲ್ಲಿ ಕಾಡು ತೆಗೆದುಕೊಂಡು ಕಾಫಿ ತೋಟ ಮಾಡಲು ನಿರ್ಧರಿಸಿದರು. ಇದು ಲಾಭಕ್ಕಾಗಲೀ ಅಥವಾ ಆದರ್ಶಕ್ಕಾಗಲೀ ಆಗಿರಲಿಲ್ಲ, ಬದಲಿಗೆ ಯಾರ ಹಂಗೂ ಇಲ್ಲದೆ ಕಾಡು ಮೇಡು ಅಲೆದಾಡಬಹುದೆಂಬ ಕಾರಣಕ್ಕಾಗಿ. ಲೇಖಕರು ಪರಿಸರವಾದಿಯಾಗಿ ರೂಪುಗೊಂಡ ಹಾದಿಯನ್ನು ಈ ಕಥೆ ವಿವರಿಸುತ್ತದೆ. ಬಾಲ್ಯದಲ್ಲಿ ತಾವು ಕಂಡ ಪರಿಸರ ನಂತರದ ದಿನಗಳಲ್ಲಿ ನಗರೀಕರಣದ ದೆಸೆಯಿಂದ ರಿಯಲ್ ಎಸ್ಟೇಟ್ ದಂಧೆಗೆ ಬಲಿಯಾಗಿ ಎಷ್ಟೊಂದು ಬದಲಾವಣೆಗೊಂಡಿದೆ ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ಅಲ್ಲದೆ ತಮ್ಮ ತಂದೆಯವರು ಮಲೆನಾಡು ಬಿಟ್ಟು ಯಾಕಾದರೂ ಈ ಮೈಸೂರಿಗೆ ಬಂದರೋ! ಎಂದು ತೇಜಸ್ವಿ ಅನೇಕ ಬಾರಿ ಯೋಚಿಸಿದ್ದುಂಟು.

'ಸುಸ್ಮಿತಾ ಮತ್ತು ಹಕ್ಕಿಮರಿ' ಎಂಬ ಕಥೆಯಲ್ಲಿ ಹಕ್ಕಿಗಳ ಫೋಟೋಗಳನ್ನು ಪುಸ್ತಕಗಳಲ್ಲಿ ನೋಡಿದಾಗ ಅವುಗಳ ಅಂದವನ್ನು ಮೆಚ್ಚಿಕೊಳ್ಳುತ್ತಿದ್ದುದರ ಬಗ್ಗೆ ಮತ್ತು ಆ ಫೋಟೋಗಳನ್ನು ತೆಗೆಯಲು ಛಾಯಾಗ್ರಾಹಕರು ಪಟ್ಟಿರಬಹುದಾದ ಕಷ್ಟಗಳ ಬಗ್ಗೆ ವಿವರಿಸಲಾಗಿದೆ. ಹಕ್ಕಿಗಳ ಫೋಟೋ ತೆಗೆಯುವುದು ಅತ್ಯಂತ ಕಷ್ಟಕರವಾದ ಕೆಲಸ. ಛಾಯಾಗ್ರಾಹಕನಿಗೆ ಕ್ಯಾಮರಾ ಬಿಟ್ಟು ಬೇರೇನೂ ಹತೋಟಿಯಲ್ಲಿರುವುದಿಲ್ಲ.

ಬೆಳಕು, ಹಕ್ಕಿಗಳ ಭಂಗಿ, ಹಿನ್ನೆಲೆ ಯಾವುದೂ ಅವನ ಇಷ್ಟದಂತೆ ಇರುವುದಿಲ್ಲ. ಸಾವಿರಾರು ಫೋಟೋಗಳಲ್ಲಿ ಅರ್ಧದಷ್ಟು ನೆಗೆಟಿವ್‌ಗಳಲ್ಲಿ ಹಕ್ಕಿಗಳೇ ಇರುವುದಿಲ್ಲ. ಇದರಿಂದ ಸಮಯ, ಫಿಲ್ಮ್, ಹಣ ವ್ಯರ್ಥವಾಗುತ್ತದೆ. ಹಕ್ಕಿಗಳು ಚಿಕ್ಕವೂ, ಚಪಲಚಿತ್ತದ ಪ್ರಾಣಿಗಳೂ ಆಗಿರುವುದರಿಂದ ರೆಕ್ಕೆ ಬಡಿಯುವುದು ಅಥವಾ ಕುತ್ತಿಗೆ ಅಲ್ಲಾಡಿಸುವುದರಿಂದ ಫೋಟೋ ಹಾಳಾಗುತ್ತವೆ. ಹಕ್ಕಿಗಳಿಗೆ ಮನುಷ್ಯರ ಬಗ್ಗೆ ಇರುವ ಭಯವೇ ದೊಡ್ಡ ತೊಂದರೆ. ಕ್ಯಾಮರಾವನ್ನು ಬಂದೂಕೆಂದು ತಿಳಿದು ಹಾರಿಹೋಗುತ್ತವೆ. ನಿರೂಪಕರು ಹಕ್ಕಿಗಳನ್ನು ತಾವೇ ಸಾಕಿ, ಮನುಷ್ಯರ ಭಯವಿಲ್ಲದಂತೆ ಮಾಡಿ ಫೋಟೋ ತೆಗೆಯಲು ಯೋಚಿಸುತ್ತಾರೆ, ಆದರೆ ಇದು ಇನ್ನಷ್ಟು ಕಷ್ಟದ ಕೆಲಸವೆಂದು ಬೇಗನೆ ಅವರಿಗೆ ಮನವರಿಕೆಯಾಗುತ್ತದೆ.

ಒಮ್ಮೆ ನಿರೂಪಕರ ತೋಟದಲ್ಲಿ ಪೇಟೆಗಳಲ್ಲಿ ಗುಬ್ಬಚ್ಚಿಗಳು ಹೇಗಿರುತ್ತವೆಯೋ ಹಾಗೆ ಅಸಂಖ್ಯಾತವಾಗಿ ಪಿಕಳಾರ (ಬುಲ್‌ಬುಲ್) ಹಕ್ಕಿಗಳಿದ್ದವು. ಜೊಟ್ಟೆ ಇರುವ ಬುಲ್‌ಬುಲ್, ಕೆಂಪು ಮೀಸೆ ಬುಲ್‌ಬುಲ್, ಹಳದಿ ಕಪಾಲದ ಬುಲ್‌ಬುಲ್, ಹೊಂಬಣ್ಣದ ತಲೆಯ ಹಸಿರು ಬುಲ್‌ಬುಲ್, ಬಿಳಿಯ ಕುತ್ತಿಗೆಯ ಬುಲ್‌ಬುಲ್, ಕೆಂಪುಗಲ್ಲದ ಹಳದಿ ಬುಲ್‌ಬುಲ್ ಹೀಗೆ ಅನೇಕ ತರಹದ ಬುಲ್‌ಬುಲ್‌ಗಳು ತೋಟದಲ್ಲಿ ಇದ್ದವು. ಕಾಡಿನ ಸಣ್ಣ ಹಕ್ಕಿಗಳು ಹಾವು, ಬೆಕ್ಕು, ಗೂಬೆಗಳಂತಹ ಪರಭಕ್ಷಕಗಳಿಂದ ತಮ್ಮ ಮೊಟ್ಟೆಗಳನ್ನು ರಕ್ಷಿಸಿಕೊಳ್ಳಲು ಮನುಷ್ಯರು ಓಡಾಡುವ ಸ್ಥಳಗಳಾದ ಮನೆಗಳ ಬಳಿ, ಸೌದೆ ಕೊಟ್ಟಿಗೆಗಳಲ್ಲಿ ಅಥವಾ ಸಸಿ ಚಪ್ಪರಗಳಲ್ಲಿ ಗೂಡು ಕಟ್ಟುತ್ತವೆ. ಏಕೆಂದರೆ ಅಪಾಯಕಾರಿ ಹಕ್ಕಿಗಳು ಮನುಷ್ಯರಿರುವ ಜಾಗಗಳಿಗೆ ಬರಲು ಹೆದರುತ್ತವೆ ಎಂಬ ನಂಬಿಕೆ ಅವುಗಳಲ್ಲಿದೆ. ನಿರೂಪಕರ ಮನೆಯ ಸಸಿ ಚಪ್ಪರದಲ್ಲಿದ್ದ ಪಿಕಳಾರ ಹಕ್ಕಿಯ ಗೂಡನ್ನು ನಿರೂಪಕರು ಮತ್ತು ಅವರ ಮಗಳು ಸುಸ್ಮಿತಾ ಗಮನಿಸುತ್ತಿದ್ದರು. ತಾಯಿ ಹಕ್ಕಿ ಅವರು ಹೋದಾಗ ಹಾರಿಹೋಗಿ, ಹಿಂದಿರುಗಿದ ನಂತರ ಮತ್ತೆ ಬಂದು ಮೊಟ್ಟೆಗಳಿಗೆ ಕಾವು ಕೊಡುತ್ತಿತ್ತು. ಒಂದು ದಿನ ತಾಯಿ ಹಕ್ಕಿ ಗೂಡಿನಲ್ಲಿ ಇರಲಿಲ್ಲ, ಮೊಟ್ಟೆಗಳು ಮಾತ್ರ ತಣ್ಣಗಾಗಿದ್ದವು. ನಂತರ ಹುಡುಕಿದಾಗ ತಾಯಿ ಹಕ್ಕಿಯ ಪುಕ್ಕಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಂಡುಬಂತು. ಇದರಿಂದ ತಾಯಿ ಹಕ್ಕಿ ಯಾವುದೋ ಪರಭಕ್ಷಕಕ್ಕೆ ಬಲಿಯಾಗಿರಬಹುದು ಎಂದು ಊಹಿಸಲಾಯಿತು. ಬೆಕ್ಕು ಗೂಡಿನಲ್ಲಿದ್ದ ಕಾವು ಕೊಡುತ್ತಿದ್ದ ಹಕ್ಕಿಯನ್ನು ತಿಂದು ಹಾಕಿದ್ದರಿಂದ ಮೊಟ್ಟೆಗಳು ತಬ್ಬಲಿಗಳಾಗುತ್ತವೆ. ಕಥೆಗಾರರು ಮತ್ತು ಸುಸ್ಮಿತಾ ಮೊಟ್ಟೆಗಳಿಗೆ ಕೃತಕವಾಗಿ ಶಾಖ ಕೊಟ್ಟು ಮರಿ ಮಾಡಲು ನಿರ್ಧರಿಸುತ್ತಾರೆ. ತಾಯಿ ಹಕ್ಕಿ ಸತ್ತ ಎರಡು ದಿನಗಳ ನಂತರ ಈ ಪ್ರಯೋಗ ಮಾಡುತ್ತಾರೆ. ಮೊಟ್ಟೆಗಳನ್ನು ಗೂಡು ಸಮೇತ ಮನೆಗೆ ತಂದು ಊಟದ ಮನೆಯಲ್ಲಿ ನಲ್ವತ್ತು ಕ್ಯಾಂಡಲ್ಲಿನ ದೀಪದ ಅಡಿ ದಾರ ಕಟ್ಟಿ ನೇತು ಹಾಕಲಾಗುತ್ತದೆ. ಮೊಟ್ಟೆಗಳು ಮರಿಯಾಗುವ ನಂಬಿಕೆ ಕಥೆಗಾರರಿಗೆ ಇರುವುದಿಲ್ಲ. ಬದಲಿಗೆ ಸುಸ್ಮಿತಾಳ ಕುತೂಹಲ ತಣಿಸಲು ಮತ್ತು ಆಕೆಗೆ ಜೀವ ವಿಕಾಸ, ವಂಶಾಭಿವೃದ್ಧಿ ಬಗ್ಗೆ ವಿವರಿಸಲು ನಿರೂಪಕರು ಈ ಪ್ರಯೋಗ ಮಾಡುತ್ತಾರೆ. ಮೊಟ್ಟೆಗಳು ಈಗಾಗಲೇ ತಣ್ಣಗಾಗಿ ಹಾಳಾಗಿರುವುದರಿಂದ

ಮರಿಯಾಗುವ ಸಾಧ್ಯತೆ ಕಡಿಮೆ ಇರುತ್ತದೆ. ಜಲಚರಗಳಿಂದ ಸಸ್ತನಿಗಳವರೆಗಿನ ವಿಕಾಸದ ಬಗ್ಗೆ ಸುಸ್ಮಿತಾಳಿಗೆ ತಿಳುವಳಿಕೆ ನೀಡಲಾಗುತ್ತದೆ. ವಿವಿಧ ಪ್ರಾಣಿ ವರ್ಗಗಳಲ್ಲಿ ಸಂತಾನೋತ್ಪತ್ತಿ ಮತ್ತು ಪೋಷಣೆಯ ವಿಧಾನಗಳಲ್ಲಿನ ವ್ಯತ್ಯಾಸಗಳನ್ನು ನಿರೂಪಕರು ವಿವರಿಸುತ್ತಾರೆ. ಮೀನುಗಳು ಮತ್ತು ಕಪ್ಪೆಚಿಪ್ಪುಗಳಂತಹ ಜಲಚರಗಳು ಬೃಹತ್ ಸಂಖ್ಯೆಯ ಮೊಟ್ಟೆಗಳನ್ನು ಇಡುತ್ತವೆ, ಆದರೆ ಬದುಕುಳಿಯುವಿಕೆಯ ಪ್ರಮಾಣ ಬಹಳ ಕಡಿಮೆ. ಹಾವು, ಹಲ್ಲಿ, ಮತ್ತು ಆಮೆಗಳಂತಹ ಸರೀಸೃಪಗಳು ನೂರಾರು ಮೊಟ್ಟೆಗಳನ್ನು ಮರಳಿನಲ್ಲಿ ಹೂತುಹಾಕುತ್ತವೆ. ಅವುಗಳ ಬದುಕುಳಿಯುವಿಕೆ ವಾತಾವರಣದ ಶಾಖವನ್ನು ಅವಲಂಬಿಸಿರುತ್ತದೆ. ಹಕ್ಕಿಗಳು ಕಡಿಮೆ ಸಂಖ್ಯೆಯ ಮೊಟ್ಟೆಗಳನ್ನಿಟ್ಟು ಗೂಡು ಕಟ್ಟಿ ತಮ್ಮ ಮೈ ಶಾಖದಿಂದ ಕಾವುಕೊಟ್ಟು ಮರಿಮಾಡುತ್ತವೆ. ಮರಿಗಳಿಗೆ ಆಹಾರ ನೀಡಿ ಹಾರಲು ಕಲಿಸಿ ಪೋಷಿಸುತ್ತವೆ. ಸಸ್ತನಿಗಳಲ್ಲಿ ಭ್ರೂಣವು ತಾಯಿಯ ಗರ್ಭದೊಳಗೆ ಬೆಳೆದು ಹೊರಬರುತ್ತದೆ, ಇದು ಅತ್ಯಂತ ಮುಂದುವರಿದ ಪೋಷಣೆಯ ಹಂತ. ಸುಸ್ಮಿತಾ ಗೂಡಿನಲ್ಲಿದ್ದ ಹಕ್ಕಿ ಮೊಟ್ಟೆಗಳು ಒಡೆದು ಮರಿಗಳಾದ ಪವಾಡವನ್ನು ಕಂಡು ಆಶ್ಚರ್ಯಚಕಿತಳಾಗುತ್ತಾಳೆ. ಅವು ಹಸಿ ಮಾಂಸದ ಮುದ್ದೆಗಳಂತೆ ಕಾಣುತ್ತಿದ್ದವು ಮತ್ತು ಆಹಾರಕ್ಕಾಗಿ ಬಾಯಿ ತೆರೆಯುತ್ತಿದ್ದವು. ಸುಸ್ಮಿತಾ ಅವುಗಳಿಗೆ ಊಟ ಬೇಕು ಎನ್ನುತ್ತಾಳೆ, ಆದರೆ ನಿರೂಪಕರಿಗೆ ಅವುಗಳಿಗೆ ಏನು ಊಟ ಕೊಡಬೇಕೆಂದು ಚಿಂತೆಯಾಗುತ್ತದೆ. ಹಕ್ಕಿಗಳು ನಿರ್ದಿಷ್ಟ ಆಹಾರಗಳಿಗೆ (ಹಣ್ಣುಗಳು, ಕೀಟಗಳು, ಕಾಳುಗಳು, ಜೇನು) ಒಗ್ಗಿಕೊಂಡಿರುತ್ತವೆ ಮತ್ತು ಬೇರೆ ಆಹಾರ ತಿಂದರೆ ಸಾಯುತ್ತವೆ. ನಿರೂಪಕರು ಮಗಳಿಗೆ ಮನುಷ್ಯರ ಊಟ ಹಕ್ಕಿಗಳಿಗೆ ಮಾರಕ ಎಂದು ವಿವರಿಸುತ್ತಾರೆ. ನಿರೂಪಕರು ತಮ್ಮ ಸಹಾಯಕರನ್ನು ಸಲಹೆ ಕೇಳಿದಾಗ ಅವರು ಹಕ್ಕಿಗಳನ್ನು ಸಾಕುವ ಯೋಚನೆಯನ್ನು ತಿರಸ್ಕರಿಸಿ ಕೋಳಿ ಸಾಕುವಂತೆ ಸೂಚಿಸುತ್ತಾರೆ.

ನಿರೂಪಕರು ಸಲೀಂ ಆಲಿ ಮತ್ತು ಇತರ ಪಕ್ಷಿಶಾಸ್ತ್ರಜ್ಞರ ಪುಸ್ತಕಗಳನ್ನು ತಿರುವಿ ಹಾಕಿದರೂ ಹಕ್ಕಿ ಮರಿಗಳನ್ನು ಸಾಕುವ ಬಗ್ಗೆ ಮಾಹಿತಿ ಸಿಗುವುದಿಲ್ಲ. ಲೇಖಕರು ಬುಲ್‌ಬುಲ್ ಹಕ್ಕಿ ಮರಿಗಳನ್ನು ಸಾಕಲು ಪ್ರಯತ್ನಿಸುತ್ತಾರೆ. ಆದರೆ ಕೀಟಗಳನ್ನು ಹಿಡಿಯಲು ಅಥವಾ ಮುಟ್ಟಲು ಇಷ್ಟಪಡದೆ ಬಾಳೆಹಣ್ಣು ತಿನ್ನಿಸಲು ನಿರ್ಧರಿಸುತ್ತಾರೆ. ಹಲ್ಲಿಲ್ಲದ ಮರಿಗಳಿಗೆ ಕಿವುಚಿದ ಬಾಳೆಹಣ್ಣಿನ ಲೇಹ್ಯವನ್ನು ತಿನ್ನಿಸಿದಾಗ ಅದು ಅವುಗಳ ಗಂಟಲಲ್ಲಿ ಸಿಕ್ಕಿಕೊಂಡು ಮೂಗಿನಿಂದ ಹೊರಬಂದು ಮರಿಗಳು ಸತ್ತುಹೋಗುತ್ತವೆ. ಮರಿಗಳ ಸಾವಿಗೆ ತಾನೇ ಕಾರಣ ಎಂದು ಕೋಪಗೊಂಡ ಸುಸ್ಮಿತಾಳ ವರ್ತನೆಯಿಂದ ಮತ್ತು ದಿಗಿಲಿನಿಂದ ಲೇಖಕರು ಉಳಿದ ಮೊಟ್ಟೆ ಹಾಗೂ ಗೂಡನ್ನು ಕಾಡಿಗೆ ಎಸೆದು ಬರುತ್ತಾರೆ. ಹಕ್ಕಿ ಮರಿಗಳನ್ನು ಸಾಕಿ ಫೋಟೋ ತೆಗೆಯುವ ತಮ್ಮ ಯೋಜನೆಯನ್ನು ಕೈಬಿಡುತ್ತಾರೆ. ವಿಜ್ಞಾನ ಮುಂದುವರಿದಿದ್ದರೂ ಕಾಡಿನ ಹಕ್ಕಿಗಳನ್ನು ಸಾಕಲು ಸಾಧ್ಯವಾಗದಿರುವ ಬಗ್ಗೆ ಪಶುವೈದ್ಯರು ಮತ್ತು ಪಕ್ಷಿತಜ್ಞರನ್ನು ವಿಚಾರಿಸಿದಾಗ ಎಲ್ಲರೂ ಕಾಡಿನ ಹಕ್ಕಿಗಳ ಸಹವಾಸಕ್ಕೆ ಹೋಗದಂತೆ ಎಚ್ಚರಿಕೆ ನೀಡುತ್ತಾರೆ. ಗಾಳಿ ಮಳೆಗೆ ಮುರಿದು ಬಿದ್ದ ಹಲಸಿನ ಮರದ ಕೊಂಬೆಯಲ್ಲಿದ್ದ ಟುವ್ವಿ ಹಕ್ಕಿಯ ಗೂಡಿನಲ್ಲಿ ಮೂರು ಮರಿಗಳು ಸಿಕ್ಕಿದವು. ನಿರೂಪಕರು ಕೊಂಬೆಯನ್ನು

ಸರಿಪಡಿಸಿದರೂ ತಾಯಿ ಹಕ್ಕಿ ಮರಿಗಳನ್ನು ತೊರೆದು ಹಿಂತಿರುಗಲಿಲ್ಲ. ಹಸಿವಿನಿಂದ ಒಂದು ಮರಿ ಸತ್ತ ನಂತರ ಲೇಖಕರು ಉಳಿದ ಎರಡು ಮರಿಗಳನ್ನು ಮನೆಗೆ ತಂದು ಕೋಳಿ ಮೊಟ್ಟೆಯ ಬಿಳಿಭಾಗವನ್ನು ಆಹಾರವಾಗಿ ನೀಡಲು ನಿರ್ಧರಿಸಿದರು. ಮೊಟ್ಟೆಯ ಬಿಳಿಭಾಗವು ಭ್ರೂಣಕ್ಕೆ ಆಹಾರವಾಗುವುದರಿಂದ ಇದು ಸೂಕ್ತ ಆಹಾರ ಎಂದು ಅವರು ತೀರ್ಮಾನಿಸಿದ್ದರು. ಮೊದಲು ಅರೆಬರೆ ಬೇಯಿಸಿದ ಕೋಳಿಮೊಟ್ಟೆಯ ಬಿಳುಪನ್ನು ಚಿಮ್ಮಟದಲ್ಲಿ ತಿನ್ನಿಸುತ್ತಾರೆ. ಮರಿಗಳು ಬೆಳೆದು ಪುಕ್ಕಗೂಡಿಸಿಕೊಂಡರೂ ತಾಯಿಯಿಂದ ಶಿಕ್ಷಣ ಸಿಗದ ಕಾರಣ ಆಹಾರವನ್ನು ಸ್ವತಃ ತಿನ್ನಲು ಕಲಿಯುವುದಿಲ್ಲ. ದೊಡ್ಡದಾದ ಮೇಲೂ ಆಹಾರವನ್ನು ಗಂಟಲಿಗೆ ತುರುಕಬೇಕಿತ್ತು. ತಾಯಿ ಹಕ್ಕಿಯು ಮರಿಗಳಿಗೆ ದಿನದಿಂದ ದಿನಕ್ಕೆ ಆಹಾರ ಬದಲಾಯಿಸುವುದು, ಹಾರಲು ಕಲಿಸುವುದು, ತಿನ್ನಬೇಕಾದ ಮತ್ತು ತಿನ್ನಬಾರದ ಆಹಾರಗಳ ಬಗ್ಗೆ ಕಲಿಸುವುದು ಮುಂತಾದ ಜಟಿಲ ಕ್ರಿಯೆಗಳನ್ನು ಮಾಡುತ್ತದೆ. ಈ ಶಿಕ್ಷಣವಿಲ್ಲದೆ ಮರಿಗಳು ಬದುಕಿ ಉಳಿಯುವುದು ಅಸಂಭವ. ಹೀಗಿರುವಾಗ ಅವುಗಳಿಗೆ ಸ್ವತಂತ್ರವಾಗಿ ತಿನ್ನಲು ಕಲಿಸಲು ನಿರ್ಧರಿಸುತ್ತಾರೆ. ಚಿಮ್ಮಟದಲ್ಲಿ ಆಹಾರ ನೀಡುವುದನ್ನು ನಿಲ್ಲಿಸಿ ಒಂದು ದಿನ ಉಪವಾಸ ಕೆಡವಿದ ನಂತರ ಅವು ತಾವೇ ಮೊಟ್ಟೆ ಬಿಳುಪು ಮತ್ತು ಅನ್ನದ ಅಗುಳನ್ನು ತಿನ್ನಲು ಕಲಿಯುತ್ತವೆ. ಅವು ಮೊದಲು ಚೆನ್ನಾಗಿ ಬೆಳೆದರೂ ಇದ್ದಕ್ಕಿದ್ದಂತೆ ಮಂಕಾಗಿ ಅದೇ ರಾತ್ರಿ ಸತ್ತುಹೋಗುತ್ತವೆ.

ಈ ಘಟನೆಯಿಂದ ಕೊನೆಗೆ ನಿರೂಪಕರು ಕಾಡಿನ ಜೀವಿಗಳ ತಂಟೆಗೆ ಹೋಗಬಾರದೆಂದು ನಿರ್ಧರಿಸುತ್ತಾರೆ. ಮನುಷ್ಯನ ಸಹಾಯ ಹಸ್ತವೂ ಸಹ ಅವುಗಳ ನಾಶಕ್ಕೆ ಕಾರಣವಾಗಬಹುದು ಎಂಬುದು ಅವರಿಗೆ ಆಗ ಮನವರಿಕೆಯಾಗುತ್ತದೆ. ಹೀಗೆ ನಿಸರ್ಗದ ನಿಗೂಢತೆಯನ್ನು ಅರ್ಥಮಾಡಿಕೊಳ್ಳಲು ನಿರೂಪಕರು ಹಾಗೂ ಅವರ ಮಗಳು ಸುಸ್ಮಿತಾ ಬಹಳಷ್ಟು ಬಗೆಯ ಪ್ರಯೋಗಗಳನ್ನು ಮಾಡಿ ಶ್ರಮಿಸಿದರು. ಪ್ರಕೃತಿಯಿಂದ ಮನುಷ್ಯ ಕಲಿಯಬೇಕಾದ ಪಾಠಗಳು ಅಗಾಧವಾಗಿವೆ. ಮುಗ್ಧ ಮಗಳ ಕುತೂಹಲದ ಸಣ್ಣಪುಟ್ಟ ಪ್ರಶ್ನೆಗಳೊಂದಿಗೆ ಶುರುವಾದ ಈ ಹಕ್ಕಿಗಳ ಬಗೆಗಿನ ಪ್ರಶ್ನೆಗಳು ಪಕ್ಷಿಶಾಸ್ತ್ರಕ್ಕೆ ಸಂಬಂಧಪಟ್ಟಂತಹ ಅನೇಕ ವಿಷಯಗಳು ಇಬ್ಬರಿಗೂ ಮನವರಿಕೆಯಾಗುತ್ತಾ ಹೋಗುತ್ತವೆ. ತೇಜಸ್ವಿಯವರ ಈ ಕಥೆಗಳ ಕುರಿತು ಕಥೆಗಾರರಾದ ಡಾ. ಕರೀಗೌಡ ಬೀಚನಹಳ್ಳಿ ಅವರು ಹೀಗೆ ಹೇಳುತ್ತಾರೆ: ''ಈ ಶತಮಾನದ ಕೊನೆಯ ದಶಕದ ಹೊತ್ತಿಗೆ ತೇಜಸ್ವಿ ಅವರ ಕಥೆಗಳು ಪ್ರಕೃತಿ ಮತ್ತು ಪರಿಸರದ ನಡುವಿನ ವಿನ್ಯಾಸವನ್ನು ಅನುಭಾವಿಕ ನೆಲೆಯಲ್ಲಿ ವಿನ್ಯಾಸಗೊಳಿಸುತ್ತವೆ. ಅವರ ಮನೋಧರ್ಮದಲ್ಲಾದ ಈ ಪಲ್ಲಟ ಆಕಸ್ಮಿಕವೇನೂ ಅಲ್ಲ. ನಮ್ಮ ಬಹುಪಾಲು ಕಥೆಗಾರರು ಕೊನೆಕೊನೆಗೆ ತಮ್ಮ ಬಾಲ್ಯದ ಅನುಭವಗಳ ಅಭಿವ್ಯಕ್ತಿಗೆ ಮರಳಿದವರೇ ಆಗಿದ್ದಾರೆ. ತೇಜಸ್ವಿಯವರ ಈ ಬದಲಾವಣೆಯ ಹಿಂದೆ ಮುಖ್ಯವಾಗಿ ಕುವೆಂಪು ಮತ್ತು ಕಾರಂತರಿದ್ದಾರೆ. ಪ್ರಕೃತಿ ಮತ್ತು ಪರಿಸರದ ನಡುವಿನ ಭೌತಿಕ ಸಂಬಂಧದ ಶೋಧನೆಗೆ ತೇಜಸ್ವಿ ಅವರು ತಮ್ಮ 'ಪರಿಸರದ ಕಥೆಗಳಲ್ಲಿ' ತೊಡಗುವುದನ್ನು ಕಾಣುತ್ತೇವೆ. ಪ್ರಕೃತಿ ಮತ್ತು ಪರಿಸರದ ಬಗ್ಗೆ ಗಾಢವಾದ ಕುತೂಹಲ, ವಿಸ್ಮಯ,

ಭಯವನ್ನು ಪ್ರಕಟಿಸುವುದನ್ನು ನೋಡುತ್ತೇವೆ. ಜೀವ ವಿಕಾಸದ ರೀತಿಯನ್ನು ವೈಜ್ಞಾನಿಕವಾಗಿ, ಕಲಾತ್ಮಕವಾಗಿ ಕಥೆಗಳ ಮೂಲಕ ವಿವರಿಸುವುದು ತೇಜಸ್ವಿಯವರ ಕಾಳಜಿಯಾಗಿದೆ. ಈ ದೃಷ್ಟಿಯಿಂದ ಅವರ 'ಮಾಸ್ತಿ ಮತ್ತು ಬೈರ', 'ಸುಸ್ಮಿತಾ ಮತ್ತು ಹಕ್ಕಿಮರಿ', 'ಕಿವಿಯೊಡನೆ ಒಂದು ದಿನ' ಇವು ಗಮನಾರ್ಹವಾದ ಪರಿಸರದ ಕಥೆಗಳಾಗಿವೆ. ಜೀವನ ಮೌಲ್ಯಗಳ ಬಗ್ಗೆ ತೇಜಸ್ವಿಯವರಿಗೆ ಇರುವ ಕಾಳಜಿ ವಿಶೇಷವಾದುದು. ಅವರ ಕಥೆಗಳಲ್ಲಿ ಬದುಕಿನ ದುರಂತ ಮತ್ತು ಹಾಸ್ಯ ಎರಡೂ ಯಮಳ ಪ್ರಶ್ನೆಗಳಾಗಿವೆ. ಕರುಣೆ ಮತ್ತು ಹಾಸ್ಯಗಳೆರಡನ್ನೂ ಸಮನಾಗಿ ವ್ಯಂಜಿಸಬಲ್ಲ ಭಾಷೆಯ ಹದ ತೇಜಸ್ವಿಯವರ ಪ್ರತಿಭೆಯ ವಿಸ್ಮಯವಾಗಿದೆ" ಎಂದು ಅವರು ಅಭಿಪ್ರಾಯಪಡುತ್ತಾರೆ.

'ಮಾನೀಟರ್' ಕಥೆಯಲ್ಲಿ ಕಿವಿ ಒಂದು ಉಡುವನ್ನು ಕಂಡು ಬೊಗಳಲು ಶುರುಮಾಡುತ್ತದೆ. ತೇಜಸ್ವಿಯವರು ಅದನ್ನು ಕೈಯಿಂದ ಹಿಡಿದು ಮನೆಗೆ ತಂದು ಸೊಂಟಕ್ಕೆ ಹಗ್ಗ ಬಿಗಿದು ಮನೆ ಪಕ್ಕದ ವಾಟೆ ಮರಕ್ಕೆ ಕಟ್ಟಿ ಹಾಕುತ್ತಾರೆ. ಆದರೆ ಮರುದಿನ ಬೆಳಗ್ಗೆ ಉಡು ಪರಾರಿಯಾಗಿರುವ ಸುದ್ದಿಯನ್ನು ಪ್ಯಾರ ತಿಳಿಸುತ್ತಾನೆ. ಇಲ್ಲಿ ವಿನೋದ, ಹಾಸ್ಯಶೈಲಿಯೊಂದಿಗೆ ಉಡುವಿನ ಪಟ್ಟು ಹೇಗೆ ಇರುತ್ತದೆಂದು ತಿಳಿಯುತ್ತದೆ.

'ಕಿವಿಯೊಡನೆ ಒಂದು ದಿನ' ಕಥೆ ತೇಜಸ್ವಿಯವರು ತಮ್ಮ ಸ್ನೇಹಿತನೊಂದಿಗೆ ನಡೆಸಿದ ಶಿಕಾರಿಯ ಅನುಭವ. ಇದು ಹುಲಿ ಅಥವಾ ಚಿರತೆಯ ಶಿಕಾರಿಯಲ್ಲ, ಒಂದು ಕಾಡುಹಂದಿಯ ಶಿಕಾರಿಯ ಕಥೆ.

'ಎಂಗ್ಟನ ಪುಂಗಿ' ಹಾವುಗೊಲ್ಲರವನ ಜೀವನಚಿತ್ರ. ಸಂತೆ–ಜಾತ್ರೆಗಳಲ್ಲಿ ಹಾವು ಪ್ರದರ್ಶಿಸಿ ಬದುಕು ನಡೆಸುವ ಎಂಗ್ಟ, ಹಾವಿನ ಕಡಿತಕ್ಕೆ ಔಷಧವೆಂದು ನಾರು, ಬೇರು, ಮಣಿ ಮಾರುವವನು. ಮನೆಗಳ ಬಳಿ ವಿಷಹಾವು ಕಂಡರೆ ಅದನ್ನು ಹಿಡಿದು ಶುಲ್ಕ ಪಡೆಯುವವನು. ಯಾವ ಪ್ರಶ್ನೆಗೂ ತನ್ನದೇ ತರ್ಕದಲ್ಲಿ ಉತ್ತರಿಸುವ ಈ ವ್ಯಕ್ತಿ, ತಾನೇ ಹಾವುಗಳನ್ನು ಮನೆಗಳ ಬಳಿ ಬಿಟ್ಟು ನಂತರ ಹಿಡಿಯುವ ನಾಟಕ ಮಾಡುತ್ತಿದ್ದಾನೋ ಎಂಬ ಅನುಮಾನ ಹಳ್ಳಿಗರಿಗೂ ತೇಜಸ್ವಿಯವರಿಗೂ. ಮಾತಿನಲ್ಲಿ ಚತುರನಾದ ಎಂಗ್ಟನ ಹಾವುಕತೆಗಳು ಅತ್ಯಂತ ಕುತೂಹಲಕರ.

ಒಮ್ಮೊಮ್ಮೆ 'ಕುಕ್ಕುಟ ಪಿಶಾಚ' ಕಥೆಯಲ್ಲಿ ಮೊಟ್ಟೆ ಇಡುವ ಅಥವಾ ಮರಿಗಳನ್ನು ಸಾಕುವ ಹಕ್ಕಿಗಳ ವಿಚಿತ್ರ ವರ್ತನೆಗಳ ಬಗ್ಗೆ ಹಳ್ಳಿಗರ ಮೂಢನಂಬಿಕೆಗಳು ಮತ್ತು ಅವಕ್ಕೆ ತೇಜಸ್ವಿಯವರು ನೀಡುವ ವೈಜ್ಞಾನಿಕ ವಿವರಣೆಗಳು ಬರುತ್ತವೆ.

ಮುಂದಿನ 'ಗಾಡ್ಲಿ' ಎಂಬ ಕಥೆಯಲ್ಲಿ ಅದೇ ಹೆಸರಿನ ಕಾಫಿತೋಟದ ಮ್ಯಾನೇಜರ್ ಅನುಭವಿಸಿದ ಅಪರೂಪದ ಫಜೀತಿಗಳ ಕಥೆ ಇದೆ. ಮಂಗಗಳ ಕಾಟ ತಾಳಲಾಗದೆ ಅವುಗಳನ್ನು ದೇವರಿಗೆ ಸಮನಾಗಿ ಭಾವಿಸಿ ಪಂಜರ ತರಿಸಿ ಸಿಕ್ಕಿಬಿದ್ದ ಮಂಗಗಳನ್ನು ಬೇರೊಂದು ಕಾಡಿಗೆ ಬಿಡಲು ಹೋದವನು ತಾನೇ ಪಂಜರದಲ್ಲಿ

ಸಿಲುಕಿಕೊಂಡು ಎರಡು ದಿನ ಅನ್ನನೀರಿಲ್ಲದೆ ಕಷ್ಟಪಟ್ಟ ಘಟನೆ ಅಚ್ಚರಿ ಮೂಡಿಸುತ್ತದೆ. ಯಾರಿಗೂ ತೊಂದರೆ ಕೊಡದ ಸಾಧು ಸ್ವಭಾವದ ಗಾಡ್ಲಿಯನ್ನು ಕೂಲಿ ಕಾರ್ಮಿಕರು ಯಾಮಾರಿಸಿ ವಂಚಿಸುತ್ತಾರೆ. ಇವನು ಕೈಗೊಂಡ ಹಲವಾರು ಕೆಲಸಕಾರ್ಯಗಳಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಎಲ್ಲಿಯೂ ನೆಲೆ ಸಿಕ್ಕದ ಹಾಗೆ ಒದ್ದಾಡುತ್ತಾನೆ. ಒಳ್ಳೆತನ ಇರಬೇಕು. ಆದರೆ ಅತಿಯಾದ ಒಳ್ಳೇತನ ತನ್ನ ಅಸ್ತಿತ್ವವನ್ನೇ ಇಲ್ಲದಾಗಿಸುತ್ತದೆ ಎಂಬುದನ್ನು ಬಹಳ ಅದ್ಭುತವಾಗಿ ತೇಜಸ್ವಿ ಈ ಪಾತ್ರದ ಮುಖೇನ ಕಟ್ಟಿಕೊಟ್ಟಿದ್ದಾರೆ.

'ಮೂಲಿಕೆ ಬಳ್ಳಿಯ ಸುತ್ತ' ಕಥೆ ಕಾಡಿನಲ್ಲಿ ಬೆಳೆಯುವ ಒಂದು ಮೂಲಿಕೆಯ ಔಷಧೀಯ ಗುಣಗಳು ತೇಜಸ್ವಿಯವರ ಗಮನಕ್ಕೆ ಹೇಗೆ ಬಂದವು ಎಂಬುದನ್ನು ವಿವರಿಸುತ್ತದೆ. 'ಹೀಗೊಂದು ಘಟನೆ ನಡೆಯಬಹುದೇ?' ಎಂಬ ಪ್ರಶ್ನೆ ಮೂಡಿಸುತ್ತಲೇ ಎಷ್ಟೋ ದೇಸಿಜ್ಞಾನ ಪರಂಪರೆಯ ವಿಸ್ಮೃತಿಗೆ ನಾವೆಲ್ಲಾ ಹೇಗೆ ಒಳಗಾಗಿದ್ದೇವೆ ಎಂಬುದನ್ನು ಈ ಕಥೆಯಲ್ಲಿ ಕಾಣಬಹುದು. ಪರಿಸರ ಬರವಣಿಗೆಯಲ್ಲಿ ಆಸಕ್ತಿ ಇರುವ ಎಲ್ಲರೂ ತಪ್ಪದೇ ಓದಲೇಬೇಕಾದ ಕಥೆ 'ಕೆರೆಯ ದಡದಲ್ಲಿ'. ಕೆರೆಯ ಸುತ್ತ ನಡೆಯುವ ಸಣ್ಣಸಣ್ಣ ಘಟನೆಗಳನ್ನು ತೇಜಸ್ವಿಯವರು ಅದ್ಭುತವಾಗಿ ಕಟ್ಟಿಕೊಡುತ್ತಾರೆ. ವಿಶೇಷವಾಗಿ ಒಂದು ಕಪ್ಪೆ, ಒಂದು ಆಮೆ ಹಾಗೂ ಒಂದು ಕಾಡುಹಂದಿ ಮರಿಯ ಆತ್ಮರಕ್ಷಣಾ ತಂತ್ರಗಳನ್ನು ಅವರು ವರ್ಣಿಸುವ ರೀತಿ ಅನನ್ಯ. ಸೂಕ್ಷ್ಮ ವೀಕ್ಷಣೆ, ಕಾಡುಪ್ರಾಣಿಗಳ ಮೇಲಿನ ಆಳವಾದ ಆಸಕ್ತಿ, ಗಂಟೆಗಳ ಕಾಲ ಕಾಯುವ ತಾಳ್ಮೆ, ವಿಶ್ಲೇಷಣೆಯಿಂದ ದೊರೆಯುವ ಒಳನೋಟಗಳು ಮತ್ತು ಯಾವುದೇ ಅತಿರೇಕವಿಲ್ಲದೆ ಕಂಡದ್ದನ್ನೇ ಬರಹಕ್ಕಿಳಿಸುವ ಶೈಲಿ ಇವೆಲ್ಲ ಸೇರಿದಾಗ ಎಂತಹ ರಸವತ್ತಾದ ಸಾಹಿತ್ಯ ಸೃಷ್ಟಿಯಾಗುತ್ತದೆ ಎಂಬುದಕ್ಕೆ ಈ ಕಥೆಯೇ ಜೀವಂತ ಸಾಕ್ಷಿ.

ತೇಜಸ್ವಿಯವರ ಸಾಕು ನಾಯಿ ಕಿವಿ ಈ ಸಂಕಲನದ ಹಲವು ಕಥೆಗಳಲ್ಲಿ ಪ್ರಮುಖ ಪಾತ್ರವಾಗಿ ಮೂಡಿಬರುತ್ತದೆ. ಮೊದಲ ಅಧ್ಯಾಯದಲ್ಲಿ ಅದನ್ನು ಅವರು ಪರಿಚಯಿಸುವ ರೀತಿ ಹೀಗಿದೆ: "ಕರ್ವಾಲೋ ಕಾದಂಬರಿಯಲ್ಲಿ ಕಾಣಿಸುವ ಕಿವಿ ಎಂಬ ನಾಯಿ ಒಂದು ಕಾಲದಲ್ಲಿ ನನ್ನೊಡನೆ ಇದ್ದ ಅಪರೂಪದ ಬುದ್ಧಿಯ ಶಿಕಾರಿ ನಾಯಿ. ಸ್ಪಾನಿಯಲ್ ಜಾತಿಯದ್ದಾದ ಕಾರಣ ಅದರ ಕಿವಿಗಳು ಸುಮಾರು ಅರ್ಧ ಅಡಿಗಿಂತ ಉದ್ದ ಇದ್ದು ತಲೆಯ ಪಕ್ಕದಲ್ಲಿ ವಿಸ್ತಾರವಾಗಿ ಇಳಿಬಿದ್ದಿತ್ತು. ಅದಕ್ಕಾಗೆ ಅದಕ್ಕೆ ಕಿವಿ ಎಂಬ ಹೆಸರು ಬಂದಿದ್ದು" ಎಂದು. ಕಿವಿಯ ಜೊತೆಗೆ ಮಾನೀಟರ್ (ಉಡು), ಹಕ್ಕಿಮರಿಗಳು, ಹಾವು, ಕುಕ್ಕುಟ, ಕಪ್ಪೆ, ಆಮೆ, ಕಾಡುಹಂದಿ, ಮಂಗಗಳು ಮೊದಲಾದ ಅನೇಕ ಪ್ರಾಣಿ-ಪಕ್ಷಿಗಳೂ ಸ್ಥಳೀಯ ವ್ಯಕ್ತಿಗಳೊಂದಿಗೆ ವಿಭಿನ್ನ ಕಥೆಗಳಲ್ಲಿ ಜೀವಂತ ಪಾತ್ರಗಳಾಗಿ ಕಾಣಿಸುತ್ತವೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ 'ಪರಿಸರದ ಕತೆ' ಕೃತಿ ಕನ್ನಡ ಸಾಹಿತ್ಯದಲ್ಲಿ ಪರಿಸರ ಸಾಹಿತ್ಯಕ್ಕೆ ವೈಚಾರಿಕ ಆಳ, ವೈಜ್ಞಾನಿಕ ದೃಷ್ಟಿ ಮತ್ತು ಮಾನವೀಯ ಸಂವೇದನೆಯನ್ನು ಒಟ್ಟಾಗಿ ನೀಡಿದ ಕೃತಿಯಾಗಿದೆ. ಈ ಕೃತಿಯಲ್ಲಿ ಪ್ರಕೃತಿ ಕೇವಲ ಹಿನ್ನೆಲೆಯಾಗದೆ, ಸ್ವತಂತ್ರ ಜೀವಂತ ವ್ಯವಸ್ಥೆಯಾಗಿ ಕಾಣಿಸಿಕೊಂಡಿದ್ದು,

ಅದರೊಳಗೆ ಮಾನವನು ಒಂದು ಅಂಶ ಮಾತ್ರ ಎಂಬ ಅರಿವು ನಿರಂತರವಾಗಿ ವ್ಯಕ್ತವಾಗುತ್ತದೆ. ತೇಜಸ್ವಿಯವರು ತಮ್ಮ ವೈಯಕ್ತಿಕ ಅನುಭವ, ಸೂಕ್ಷ್ಮ ವೀಕ್ಷಣೆ ಮತ್ತು ಹಾಸ್ಯಭರಿತ ನಿರೂಪಣೆಯ ಮೂಲಕ ಮನುಷ್ಯ ಮತ್ತು ಪ್ರಕೃತಿ ಸಂಬಂಧಗಳ ಸಂಕೀರ್ಣತೆಯನ್ನು ಅತ್ಯಂತ ಸಹಜವಾಗಿ ಅನಾವರಣಗೊಳಿಸುತ್ತಾರೆ. ಕಾಡು, ಕೆರೆ, ಹಕ್ಕಿ, ಪ್ರಾಣಿಗಳು, ಹಳ್ಳಿಗರು ಹಾಗೂ 'ಕಿವಿ'ಯಂತಹ ಪ್ರಾಣಿಪಾತ್ರಗಳ ಮೂಲಕ ಅವರು ಪರಿಸರದ ನಿಗೂಢತೆ, ಜೀವವಿಕಾಸದ ತತ್ವ, ಮನುಷ್ಯನ ಹಸ್ತಕ್ಷೇಪದ ಮಿತಿಗಳು ಮತ್ತು ಅದರ ಪರಿಣಾಮಗಳನ್ನು ತೇಜಸ್ವಿ ಸ್ಪಷ್ಟವಾಗಿ ಚಿತ್ರಿಸುತ್ತಾರೆ. ವಿಶೇಷವಾಗಿ 'ಸುಸ್ಮಿತಾ ಮತ್ತು ಹಕ್ಕಿಮರಿ' ಕಥೆಯಲ್ಲಿ ಮಾನವೀಯ ಕರುಣೆಯೇ ಕೆಲವೊಮ್ಮೆ ಜೀವಹಾನಿಗೆ ಕಾರಣವಾಗಬಹುದೆಂಬ ವೈಜ್ಞಾನಿಕ ಸತ್ಯ ಮನನೀಯವಾಗಿ ಮೂಡಿಬರುತ್ತದೆ. ಹೀಗಾಗಿ 'ಪರಿಸರದ ಕತೆ' ಕೃತಿ ಪರಿಸರ ನಾಶದ ಬಗ್ಗೆ ದೂರು ಹೇಳುವ ಬರವಣಿಗೆಯಷ್ಟೇ ಅಲ್ಲ. ಅದು ಮನುಷ್ಯನಿಗೆ ತನ್ನ ಸ್ಥಾನ, ಹೊಣೆಗಾರಿಕೆ ಮತ್ತು ಸಹಜ ಜೀವನಶೈಲಿಯನ್ನು ಮರುಪರಿಶೀಲಿಸುವಂತೆ ಮಾಡುವ ಎಚ್ಚರಿಕೆಯ ಧ್ವನಿಯಾಗಿಯೂ ಕಾಣುತ್ತದೆ. ಪ್ರಕೃತಿಯೊಂದಿಗೆ ಸಹಜ ಸಹವಾಸವೇ ಮಾನವ ಬದುಕಿನ ಸ್ಥಿರತೆಗೆ ಮೂಲ ಎಂಬ ಸಂದೇಶವನ್ನು ತೇಜಸ್ವಿಯವರು ಈ ಕೃತಿಯ ಮೂಲಕ ಪರಿಣಾಮಕಾರಿಯಾಗಿ ಸಾರುತ್ತಾರೆ. ಈ ಕೃತಿ ಕನ್ನಡ ಸಾಹಿತ್ಯದಲ್ಲಷ್ಟೇ ಅಲ್ಲದೆ ಸಮಕಾಲೀನ ಪರಿಸರ ಚಿಂತನೆಯಲ್ಲಿ ಅತೀ ಮುಖ್ಯವಾದ ದಿಕ್ಸೂಚಿಯಾಗಿ ನಿಲ್ಲುತ್ತದೆ.

## ಪರಾಮರ್ಶನ ಗ್ರಂಥಗಳು:


1. ಪೂರ್ಣಚಂದ್ರ ತೇಜಸ್ವಿ ಕೆ.ಪಿ., (2010), ಪರಿಸರದ ಕತೆ, ಮೈಸೂರು: ಪುಸ್ತಕ ಪ್ರಕಾಶನ.
2. ಕುವೆಂಪು, (2014), ವಿಹಗ, ಮೈಸೂರು: ಉದಯರವಿ ಪ್ರಕಾಶನ.
3. ಕರೀಗೌಡ ಬೀಚನಹಳ್ಳಿ, (2011), ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
4. ತಿಪ್ಪೇಸ್ವಾಮಿ ಜಿ.ಆರ್, (2018), ಸಣ್ಣಕಥೆ (ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ: ಸಂಪುಟ 4), ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
5. ಕರೀಗೌಡ ಬೀಚನಹಳ್ಳಿ, (2017), ತೇಜಸ್ವಿ ಕಥೆಗಳ ಕುರಿತು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.